

# ಕಂಗನಾ 'ರನೌಟ್!'

'ಹ್ಯಾಪಿ ನ್ಯೂ ಇಯರ್' ಚಿತ್ರತಂಡ ನ್ಯೂಯಾರ್ಕ್‌ನಲ್ಲಿ ಶೂಟಿಂಗ್ ಮುಗಿಸಿ ಭಾರತಕ್ಕೆ ವಾಪಸಾಗಲು ವಿಮಾನ ನಿಲ್ದಾಣಕ್ಕೆ ಬಂದಿತ್ತು. ನಾಯಕಿ ಕಂಗನಾ ರೌನತ್ ಕೂಡಾ ಜತೆಗಿದ್ದಳು. ಆದರೆ ಉಳಿದವರೆಲ್ಲ ವಿಮಾನ ಹತ್ತಿದರೂ ಆಕೆ ಹತ್ತಲೇ ಇಲ್ಲ. ಮುಂಬೈ ವಿಮಾನದ ಬದಲಾಗಿ ಬೇರೆ ವಿಮಾನವನ್ನು ಹತ್ತಿದಳಂತೆ.

ಟಿಕೆಟಿಲ್ಲದೆ ಹತ್ತಿಸಿಕೊಂಡಿಲ್ಲ ಬಿಡಿ; ಆಕೆಯ ಜತೆಗೆ ಹಾಲಿವುಡ್ ನಟ ಗೆರಾರ್ಡ್ ಬಟ್ಲರ್ ಕೂಡಾ ಇದ್ದನಂತೆ. ಇಬ್ಬರೂ ಜತೆಯಾಗಿ ಯಾವುದೋ ದ್ವೀಪರಾಷ್ಟ್ರಕ್ಕೆ ವಿಹಾರಕ್ಕೆ ಹೊರಟರಂತೆ. ಹಾಗೆಂದು ಮುಂಬೈಯಲ್ಲಿ ಗುಲ್ಲೋ ಗುಲ್ಲು.

ಕಂಗನಾಳ ಶೂಟಿಂಗ್ ಸ್ಥಳಕ್ಕೆ ಭೇಟಿ ಕೊಟ್ಟ ಬಟ್ಲರ್ ಆಕೆಯ ಜತೆ 2–3 ಪಾರ್ಟಿಗಳಲ್ಲೂ ಕಾಣಿಸಿಕೊಂಡಿದ್ದನಂತೆ. ಶೂಟಿಂಗ್ ಮುಗಿಯುವ ಹೊತ್ತಿಗೆ ಇಬ್ಬರೂ ಪರಸ್ಪರ ಬಿಟ್ಟಿರಲಾರದಂತಹ ಗೆಳೆತನ ಉಂಟಾಯಿತಂತೆ. ವಿಮಾನ ನಿಲ್ದಾಣದಿಂದ ಬೇರೆಡೆಗೆ ಹೋಗುವ ವಿಷಯವನ್ನು ಕಂಗನಾ ಯುನಿಟ್‌ನ ಯಾರಿಗೂ ತಿಳಿಸಲೂ ಇಲ್ಲವಂತೆ.

ಈ ಚಿತ್ರದಲ್ಲಿ ಕಂಗನಾ ಜತೆಗೆ ಹೀರೊ ಆಗಿ ನಟಿಸಿದಾತ ಸನ್ನಿ ಡಿಯೊಲ್. ವಿಮಾನ ಹತ್ತುವಾಗ ಕಂಗನಾ ಕಣ್ಮರೆಯಾದದ್ದರ ಬಗ್ಗೆ ಆತ ಕ್ಯಾರೆ ಅನ್ನಲಿಲ್ಲವಂತೆ. 'ಎಲ್ಲಿಗೆ ಹೊರಟಿದ್ದೀಯಮ್ಮ' ಎಂದೂ ಕೇಳಲಿಲ್ಲವಂತೆ.

ಅಂದ ಹಾಗೆ ಬಟ್ಲರ್ ಬಾಲಿವುಡ್ ನಟಿಯರ ಜತೆಗೆ ಓಡಾಡುವುದು ಇದೇ ಮೊದಲಲ್ಲ. ಕೆಲವು ತಿಂಗಳ ಹಿಂದೆ ಪ್ರಿಯಾಂಕಾ ಚೋಪ್ರಾಳ ಮುಂಬೈಯ ಯರಿ ರೋಡ್ ಅಪಾರ್ಟ್‌ಮೆಂಟ್‌ನಲ್ಲಿಯೂ ಆತ ಪ್ರಿಯಾಂಕಾ ಜತೆಗೆ ಪಾರ್ಟಿಯೊಂದರಲ್ಲಿ ಕಾಣಿಸಿಕೊಂಡಿದ್ದ. ಆಗಲೂ ಇಬ್ಬರ ನಡುವೆ ಗುಸುಗುಸು ಹಬ್ಬಿತ್ತು. ಈಗ ಕಂಗನಾ ಸರದಿ!

# ಬಿಪಾಸಾ ಇನ್ ಲವ್?

ಜಾನ್ ಅಬ್ರಹಾಂನ ಗೆಳೆತನ ಬಿಟ್ಟ ಬಳಿಕ ಬಿಪಾಸಾ ಬಿಂದಾಸ್ ಆಗಿ ಪಾರ್ಟಿಗಳಲ್ಲಿ ಓಡಾಡುತ್ತಿದ್ದಾಳೆ. ಈಗಾಕೆ ಸಿಂಗಲ್. ಹಾಗಾಗಿ ಹೊಸ ಗೆಳೆತನವನ್ನು ಅರಸುವ ಕೆಲಸ ನಡೆದೇ ಇದೆಯಂತೆ.

ಹೊಸ ಚಿತ್ರ 'ಸಿಂಗುಲಾರಿಟಿ'ಯಲ್ಲಿ ನಟಿಸುತ್ತಿರುವ ಬಿಪ್ಸ್, ತನ್ನ ಸಹನಟ ಹಾಲಿವುಡ್‌ನ ಜೋಶ್ ಹಾರ್ನೆಟ್ ಜತೆ ತೀರಾ ಹತ್ತಿರದ ಸ್ನೇಹ ಬೆಳೆಸಿಕೊಂಡಿದ್ದಾಳೆ ಎನ್ನುವುದೀಗ ಹೊಸ ಸುದ್ದಿ. ಮಧ್ಯಪ್ರದೇಶ ಒಳನಾಡಿನಲ್ಲಿ ನಡೆಯುತ್ತಿರುವ ಶೂಟಿಂಗ್ ವೇಳೆ ಬಿಪ್ಸ್ ಮತ್ತು ಹಾರ್ನೆಟ್ ಇಬ್ಬರೂ ಒಂದೇ ಹೋಟೆಲ್‌ನಲ್ಲಿ ಉಳಿದುಕೊಂಡಿದ್ದರಂತೆ. ಚಿತ್ರದ ಉಳಿದ ನಟ–ನಟಿಯರೆಲ್ಲ ಬೇರೆ ಹೋಟೆಲ್‌ನಲ್ಲಿ ಇದ್ದರಂತೆ. ಪ್ರತಿ ರಾತ್ರಿ ಶೂಟಿಂಗ್ ಮುಗಿದ ಬಳಿಕ ಬಿಪ್ಸ್ ಮತ್ತು ಹಾರ್ನೆಟ್ ಪಾರ್ಟಿ ಮಾಡುತ್ತಾ ರಾತ್ರಿ ಬಹಳ ಹೊತ್ತಿನವರೆಗೆ ಕುಳಿತಿರುತ್ತಿದ್ದರಂತೆ. ಬಿಪ್ಸ್ ಮಾತ್ರ ಈ ಸುದ್ದಿಯ ಬಗ್ಗೆ ಪ್ರತಿಕ್ರಿಯೆ ನೀಡದೆ ತಣ್ಣನೆ ಇದ್ದಾಳಂತೆ. ಇದಕ್ಕೂ ಮುನ್ನ 'ಧಮ್ ಮಾರೊ ಧಮ್' ಚಿತ್ರದ ಶೂಟಿಂಗ್‌ನಲ್ಲೂ ಸಹನಟ ರಾಣಾ ಜತೆ ಬಿಪ್ಸ್ ತುಂಬ ನಿಕಟವಾಗಿ ಓಡಾಡಿಕೊಂಡಿದ್ದ ಬಗ್ಗೆ ವರದಿಯಾಗಿತ್ತು. ಜಾನ್ ನಿರ್ಗಮನದಿಂದ ಉಂಟಾದ ಶೂನ್ಯ ತುಂಬಿಸಿಕೊಳ್ಳಲು ಬಿಪ್ಸ್ ಓಡಾಡುತ್ತಿರಬಹುದೆ?

■ ಬಿಂದು

